ದಿನಾಂಕ 19-04-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರಿಂದಃ-

2. ದಾವಾ ಸ್ವತ್ತು ಕೆಂಪಯ್ಯನಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ತಾತನ ಆಸ್ತಿ ಎಂದು ನುಡಿಯುತ್ತಾರೆ. ಅವರ ತಾತನ ಹೆಸರು ನರಸಿಂಹಯ್ಯ. ನರಸಿಂಹಯ್ಯನವರು ದಾವಾ ಸ್ವತ್ತನ್ನು ಹರಾಜಿನಲ್ಲಿ ತೆಗೆದುಕೊಂಡರು. ಹರಾಜು ಯಾವಾಗ ಆಯಿತು ಎಂದರೆ ಸಾಕ್ಷಿಯು 1970 ಕ್ಕೂ ಮುಂಚೆ ಆಗಿತ್ತು ಎಂದು ನುಡಿಯುತ್ತಾರೆ. ನರಸಿಂಹಯ್ಯನಿಗೆ ನಾಲ್ಕು ಜನ ಮಕ್ಕಳು. ಸಾಕ್ಷಿಯು ನರಸಿಂಹಯ್ಯನವರು ನನ್ನ ಪತಿಯ ತಾತ ಎಂದು ನುಡಿಯುತ್ತಾರೆ. ಕೆಂಪಯ್ಯನವರ ತಂದೆಯ ಹೆಸರು ನರಸಿಂಹಯ್ಯ ಅಲಿಯಾಸ್ ಬೋಡಣ್ಣ. ನರಸಿಂಹಯ್ಯ ಅಲಿಯಾಸ್ ಬೋಡಣ್ಣರವರಿಗೆ ಅವರ ತಂದೆಯಿಂದ ಹೇಗೆ ಬಂತು ಎಂದರೆ ಸಾಕ್ಷಿಯು ನಾಲ್ಕು ಜನರಿಗೆ ಭಾಗ ಕೊಟ್ಟಾಗ ಭಾಗದಲ್ಲಿ ಬಂತು ಎಂದು ನುಡಿಯುತ್ತಾರೆ. ನರಸಿಂಹಯ್ಯನ ನಾಲ್ಕು ಜನ ಗಂಡು ಮಕ್ಕಳ ನಡುವೆ ವಿಭಾಗ ಯಾವಾಗ ಆಯಿತು ಎಂದರೆ ಸಾಕ್ಷಿಯು 1970 ರಲ್ಲಿ ಆಯಿತು ಎಂದು ನುಡಿಯುತ್ತಾರೆ. ನರಸಿಂಹಯ್ಯನವರು ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿಯು ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಕೆಂಪಯ್ಯನವರಿಗೆ ದಾವಾ ಸ್ವತ್ತಿನ ಸಂಬಂಧ ಮಾಲೀಕತ್ವ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ

ಕೆಂಪಯ್ಯನವರಿಗೆ ಮಾಲೀಕತ್ವ ಇತ್ತು ಎಂದು ತೋರಿಸುವ ಬೇರೆ ದಾಖಲೆಗಳು ಇಲ್ಲ. ದಾವಾ ಸ್ವತ್ತನ್ನು ಕೆಂಪಯ್ಯನವರ ತಾತ ನರಸಿಂಹಯ್ಯನವರು ಹರಾಜಿನಲ್ಲಿ ಕೊಂಡುಕೊಂಡರು ಎಂದು ವಾದಪತ್ರದಲ್ಲಿ ಬರೆಸಿಲ್ಲ. ದಾವಾ ಸ್ವತ್ತು ವಿಭಾಗದಲ್ಲಿ ಕೆಂಪಯ್ಯನ ತಂದೆ ನರಸಿಂಹಯ್ಯನಿಗೆ ಬಂತು ಎಂದು ವಾದಪತ್ರದಲ್ಲಿ ಬರೆಸಿದ್ದೇನೆ. ಮೂಲ ಪುರುಷ ನರಸಿಂಹಯ್ಯನಿಗೆ ಐದು ಜನ ಮಕ್ಕಳು ಎಂದರೆ ಸಾಕ್ಷಿಯು ನಾಲ್ಕು ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಎಂದು ನುಡಿಯುತ್ತಾರೆ. ಕೆಂಪಯ್ಯನವರಿಗೆ ದಾವಾ ಸ್ವತ್ತು ಅವರ ತಂದೆಯಿಂದ ಬಂತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಪತಿ ಕೆಂಪಯ್ಯರವರ ಒಬ್ಬ ಅಣ್ಣನ ಹೆಸರು ನರಸಿಂಹಯ್ಯ ಅಲಿಯಾಸ್ ಹೊಟ್ಟಪ್ಪ. ಅವರ ಹೆಸರು ಹೊಟ್ಟಪ್ಪ ಅಲ್ಲ ಜಿಂದಯ್ಯ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

4. ದಿನಾಂಕ 20.07.1990 ರಲ್ಲಿ ನಿಮ್ಮ ಕುಟುಂಬದಲ್ಲಿ ಏನಾದರೂ ಒಡಂಬಡಿಕೆ ಆಗಿತ್ತಾ ಎಂದರೆ ಸಾಕ್ಷಿಯು ವಿಭಾಗ ಆಗಿತ್ತು ಎಂದು ನುಡಿಯುತ್ತಾರೆ. ಆ ವಿಭಾಗ ಪತ್ರ ಮನೆಯಲ್ಲಿದೆ. ದಿನಾಂಕ 06.03.1992 ರಲ್ಲಿ ಕೆಂಪಯ್ಯನವರು ಸಚ್ಚಿದೇವ್ ಗಣೆರವರ ಜೊತೆ ಕರಾರು ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಇಲ್ಲ, ಮಾತುಕತೆ ಮಾತ್ರ ಆಗಿತ್ತು ಎಂದು ನುಡಿಯುತ್ತಾರೆ. ಅವರಿಂದ ಕೆಂಪಯ್ಯನವರು 30,000/- ರೂಪಾಯಿ ಹಣ ಪಡೆದುಕೊಂಡಿದ್ದರು ಎಂದರೆ ಸರಿ. ಸಚ್ಚಿದೇವ್ ಗಣೆರವರು ಸೆಂಟರ್ ಪಾಯಿಂಟ್ ರಿಯಲ್ ಎಸ್ಟೇಟ್ ಫರ್ಮ್ ಎಂಬ ಸಂಸ್ಥೆ ಪ್ರಾರಂಭಿಸಿದ್ದು ಅವರು ಅದರ ಮಾಲೀಕರು ಎಂದರೆ ಸರಿ.

ಒಂದು ಎಕರೆಗೆ ಒಂದು ಲಕ್ಷ ರೂಪಾಯಿಯಂತೆ ಮಾತುಕತೆ ಆಗಿತ್ತು ಎಂದರೆ ಸರಿ. ಸೆಂಟರ್ ಪಾಯಿಂಟ್ ರಿಯಲ್ ಎಸ್ಟೇಟ್ ಕಂಪನಿಯಲ್ಲಿ ರಾಜಣ್ಣರವರು ಪ್ರತಿನಿಧಿಸುತ್ತಿದ್ದರು ಎಂದರೆ ಸರಿ. ನನ್ನ ಪತಿ ಕೆಂಪಯ್ಯನವರು ದಿನಾಂಕ 10.03.1993 ರಲ್ಲಿ ಸದರಿ ರಾಜಣ್ಣರವರಿಗೆ (1 ನೇ ಪ್ರತಿವಾದಿ) ನೋಂದಾಯಿತ ಜಿ.ಪಿ.ಎ.,ಯನ್ನು ಸೆಂಟರ್ ಪಾಯಿಂಟ್ ರಿಯಲ್ ಎಸ್ಟೇಟ್ ಕಂಪನಿಯವರಿಗೆ ಬರೆದುಕೊಟ್ಟರು ಎಂದರೆ ಸರಿ. ನನ್ನ ಪತಿ ಸೆಂಟರ್ ಪಾಯಿಂಟ್ ರಿಯಲ್ ಎಸ್ಟೇಟ್ ಕಂಪನಿಯವರಿಗೆ ರವರಿಗೆ ಅಗ್ರಿಮೆಂಟ್ ಸಹ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ.

5. ಕೆಂಪಯ್ಯನವರೇ ಭೂಪರಿವರ್ತನೆಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ದಿನಾಂಕ 02.11.1993 ರಂದು ಎ.ಸಿ.,ರವರು ಭೂಪರಿವರ್ತನೆ ಆದೇಶ ಮಾಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಜಮೀನನ್ನು ಸೈಟುಗಳಾಗಿ ವಿಂಗಡಿಸಿದರು ಎಂದರೆ ಸಾಕ್ಷಿಯು ಅದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸೈಟುಗಳಾಗಿ ವಿಂಗಡಿಸಿದ ನಂತರ ಪಂಚಾಯಿತಿಯಿಂದ ಖಾತೆಯಾಗಿದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ 158 ಸೈಟುಗಳಾಗಿ ವಿಂಗಡಿಸಿದ್ದರು ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ.

6. ಕೆಂಪಯ್ಯನವರ ಸಹಿಯನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಇದು ಯಾರ ಸಹಿ ಎಂದರೆ ಸಾಕ್ಷಿಯು ಸರಿಯಾಗಿ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ

ಪ್ರತಿವಾದಿ 158 ಸೈಟುಗಳನ್ನು ಜಿ.ಪಿ.ಎ.,ಯ ಆಧಾರದ ಮೇಲೆ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 158 ಸೈಟುಗಳನ್ನು 1ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎಂದು ದಾವಾ ಸಲ್ಲಿಸುವ ಕಾಲಕ್ಕೆ ನಮಗೆ ಗೊತ್ತಿತ್ತು ಎಂದರೆ ಸರಿ. ನಮಗೆ ಗೊತ್ತಿಲ್ಲದ ಹಾಗೆ ಸೈಟುಗಳನ್ನು ಮಾರಾಟ ಮಾಡಿದ್ದಾರೆ ಎಂದು ವಾದಪತ್ರದಲ್ಲಿ ತಿಳಿಸಿಲ್ಲ. ಕ್ರಯಪತ್ರದಂತೆ 158 ಜನ ಸೈಟುಗಳನ್ನು ಖರೀದಿ ಮಾಡಿರುವವರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಇಲ್ಲ, ನಾವೇ ಇದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಪತಿರವರು ಬರೆದುಕೊಟ್ಟಿರುವ ಜಿ.ಪಿ.ಎ.,ಯ ಆಧಾರದ ಮೇಲೆ 1ನೇ ಪ್ರತಿವಾದಿ 158 ಸೈಟುಗಳನ್ನು ಮಾರಾಟ ಮಾಡಿದ್ದು, 158 ಜನರು ಸೈಟುಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ಜಿ.ಪಿ.ಎ.,ನಲ್ಲಿ ನಮ್ಮ ಪತಿಯವರು 1ನೇ ಪ್ರತಿವಾದಿಯು ಜಿ.ಪಿ.ಎ.,ಯ ಆಧಾರದ ಮೇಲೆ ಆಸ್ತಿಯನ್ನು ಮಾರಾಟ ಮಾಡಬಹುದು, ಹಣ ಉಪಯೋಗಿಸಿಕೊಳ್ಳಬಹುದು ಎಂದು ಅಧಿಕಾರ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಮಗೆ ಮೋಸ ಆಗಿದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಮೋಸ ಮಾಡಿದ್ದಾರೆಂದು ನೀವು ಅಥವಾ ನಿಮ್ಮ ಪತಿ ದೂರು ಕೊಡುವುದು ಅಥವಾ ಕ್ರಮ ತೆಗೆದುಕೊಳ್ಳುವುದು ಮಾಡಿದ್ದೀರಾ ಎಂದರೆ ಸಾಕ್ಷಿಯು ಈ ದಾವೆ ಹಾಕಿರುವುದನ್ನು ಬಿಟ್ಟು ಬೇರೆ ಕ್ರಮ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. 158 ಜನರು ಅವರು ಖರೀದಿ ಮಾಡಿರುವ ಸೈಟುಗಳ ಸಂಬಂಧ ಪಂಚಾಯಿತಿಯಿಂದ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅದು ನಮಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. 7 ರಿಂದ 8 ಜನ ಸೈಟುಗಳಲ್ಲಿ ಮನೆ ಸಹ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸೈಟುಗಳನ್ನು ಖರೀದಿ ಮಾಡಿರುವವರ ಸೈಟುಗಳನ್ನು ಹೊಡೆದುಕೊಳ್ಳಬೇಕೆಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

8. 158 ಜನ ಸೈಟುಗಳನ್ನು ಖರೀದಿ ಮಾಡಿರುವವರು ನೀಡಿರುವ ಹಣ ರಾಜಣ್ಣರವರಿಂದ ನನಗೆ ತಲುಪಿದೆ ಎಂದು ನನ್ನ ಪತಿ ದಿನಾಂಕ 05.12.1993 ರಂದು ಒಂದು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 5 ರವರು 158 ಸೈಟುಗಳ ವಿವರವನ್ನು ಲಿಖಿತ ಹೇಳಿಕೆಯಲ್ಲಿ ಬರೆಸಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಲಿಖಿತ ಹೇಳಿಕೆಯಲ್ಲಿ ಹೇಳಿರುವ 158 ಜನ ಸೈಟುಗಳ ಖರೀದಿದಾರರನ್ನು ಈ ಕೇಸಿನಲ್ಲಿ ನಂತರದಲ್ಲಿ ಪಾರ್ಟಿಯಾಗಿ ಮಾಡಿಲ್ಲ. 1 ನೇ ಪ್ರತಿವಾದಿ ಮಾಡಿಸಿರುವ ಖಾತೆಯನ್ನು ಪ್ರಶ್ನಿಸಿ ನಾವು ಅಪೀಲು ಸಲ್ಲಿಸಿಲ್ಲ. 1993 ರ ನಂತರ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಅಸ್ತಿತ್ವದಲ್ಲೇ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡಬೇಕೆಂದು ನ್ಯಾಯಾಲಯದ ದಾರಿ ತಪ್ಪಿಸಲು ನಿಪಿ-2 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

9. ದಿನಾಂಕ 31.10.1996 ರಲ್ಲಿ ಪವರ್ ಅಟಾರ್ನಿಯನ್ನು ರದ್ದು ಮಾಡಿದ್ದಾರೆ ಎಂದು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ಮೋಸ ಮಾಡಿರುವವರು 1 ನೇ ಪ್ರತಿವಾದಿ ರಾಜಣ್ಣ ಮಾತ್ರ, ಸೈಟುಗಳನ್ನು ಖರೀದಿ ಮಾಡಿರುವವರು ಅಲ್ಲ. ನಿಪಿ-2 ನ್ನು ಹೊರತುಪಡಿಸಿ ದಾವಾ ಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿದ್ದೀರಿ ಎಂದು ತೋರಿಸಲು ಬೇರೆ

ದಾಖಲೆ ಇದೆಯಾ ಎಂದರೆ ಸಾಕ್ಷಿಯು ಎಲ್ಲಾ ಕೊಟ್ಟಿದ್ದೇವೆ, ನಾವೇ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. 1993 ರ ನಂತರ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾವು ಕಂದಾಯ ಪಾವತಿಸಿಲ್ಲ. ದಾವಾ ಸ್ವತ್ತಿಗೆ ನಾವು ಮಾಲೀಕರೂ ಅಲ್ಲ, ನಾವು ಸ್ವಾಧೀನದಲ್ಲಿಯೂ ಇಲ್ಲ ಎಂದರೆ ಸರಿಯಲ್ಲ. ಖರೀದಿದಾರರಿಗೆ ಮೋಸ ಮಾಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

19 ನೇ ಪ್ರತಿವಾದಿ ಪರ ಶ್ರೀ ಆರ್.ಎ., ವಕೀಲರು ಪ್ರತಿವಾದಿ 5 ಮತ್ತು 6 ರವರ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು.

ಇತರೆ ಪ್ರತಿವಾದಿಗಳ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.